ಮೈಸೂರ ಗೆಜಿಟ್.

ಸಂ. 42.] ಸರ್ಕಾರದಿಂದ ಪ್ರಾಯುಷ್ ಆದ್ದು. [ನಂ. 10.

ಬೆಂಗಳೂರು, ಗುರುವಾರ, ಮಾರ್ಚ್ ತಾ॥ 7, ಸನ್ 1907.

II ನೆ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಜೀಲ್ಲಾ ಜಡ್ಜಿಗಳು ಮುಂತಾದವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಮೈಸೂರ ರೆವಿನ್ಯೂ ಸರ್ವೆ ಮತ್ತು ಸೆಟ್ಲಮೆಂಟ್ ಇಲಾಖಾ.

ಇಸ್ತಿಹಾರ್‌ನಾಮೆ.

ನಂ. 181 - ಬೆಂಗಳೂರು, ತಾರೀಖು 20ನೆ ಫೆಬ್ರುವರಿ 1907ನೆ ಇಸವಿ.

ಇದರಿಂದ ಸರ್ವಸ್ಯ ಜನಗಳಿಗೂ ತಿಳಿಯತಕ್ಕ ಬಗ್ಗೆ ಪ್ರಕಟಿಸಲ್ಪಡುವದೇನಂದರೆ—ಅವ್ವಲ್ ಸರ್ವೆ ಜವಾಬಂದಿ ಕಾಲದಲ್ಲಿ ಬೆಂಗಳೂರು ಡಿಸ್ಟ್ರಿಕ್ಟ್ ಪೈಕಿ ನಾಲ್ಕು ಬೆಂಗಳೂರು ಮತ್ತು ಕೆಂಗೇರಿ ತಾಲ್ಲೂಕುಗಳಿಗೆ ಸೇರಿದ್ದು ಹಾಲಿ ಇದರಡಿ ನಮೂದಿಸಿರುವ 5 ಬೇರೆ ಬೇರೆ ತಾಲ್ಲೂಕುಗಳಲ್ಲಿ ಅಡಗಿರುವ 326 ಸರಕಾರಿ ಗ್ರಾಮಗಳಲ್ಲಿ ಪರಿಶೋಧಿಸಲ್ಪಟ್ಟ ಲಕ್ಷಾರದ ದರಗಳನ್ನು ಶ್ರೀಮರ್ ಮಹಾರಾಜಾ ಸರ್ಕಾರದವರು ಮಂಜೂರು ಮಾಡಿರುತ್ತಾರಾಗಿ ಸದರಿ ಅಕಾರಯಾನೆ ಕಂದಾಯವನ್ನು ಪ್ರಸಿದ್ಧಪಡಿಸುವಿಕೆಯು ಬೆಂಗಳೂರಿನಲ್ಲಿ 1907ನೆ ಮಾರ್ಚ್ ತಾರೀಖು 18 ಅಥವಾ ಆ ಪುಮ್ಮಾರಿಗೆ ಪ್ರಾರಂಭಿಸಲ್ಪಡುವದು.

281 ಗ್ರಾಮಗಳು ಹಾಲಿ ಬೆಂಗಳೂರು ತಾಲ್ಲೂಕಿನಲ್ಲಿರುವವು.
17 ಗ್ರಾಮಗಳು ಹಾಲಿ ಜನ್ನಪಟ್ಟಣ ತಾಲ್ಲೂಕು ಪೈಕಿ ಕ್ಲೋಸ್‌ಪೇಟೆ ಸಬ್ ತಾಲ್ಲೂಕಿನಲ್ಲಿರುವವು.
22 ಗ್ರಾಮಗಳು ಹಾಲಿ ಮಾಗಡಿ ತಾಲ್ಲೂಕಿನಲ್ಲಿರುವವು.
4 ಗ್ರಾಮಗಳು ಹಾಲಿ ನೆಲಮಂಗಲ ತಾಲ್ಲೂಕಿನಲ್ಲಿರುವವು.
2 ಗ್ರಾಮಗಳು ಹಾಲಿ ಹೊಸಕೋಟೆ ತಾಲ್ಲೂಕಿನಲ್ಲಿರುವವು.

326

ಡಿ. ಶಾಮರಾವ್,
ಸೂಪರಿಂಟೆಂಡೆಂಟ್ ರೆವಿನ್ಯೂ ಸರ್ವೆ ಮತ್ತು ಸೆಟ್ಲಮೆಂಟ್, ಮೈಸೂರು.